ಅಸಲು ದಾವೆ ಸಂಖ್ಯೆ -172/2024

ಪಿ.ಡಬ್ಲ್ಯೂ - 1

**ದಿನಾಂಕ 23-06-2025 ರಂದು ಸಾಕ್ಷಿಯವರಿಗೆ  ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ.ವಿ.ಬಿ.ಎಚ್ ವಕೀಲರಿಂದ ಪ್ರತಿವಾದಿ ಪರವಾಗಿ**

1. ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನಿಮಗೆ ಯಾವುದಾದರೂ ಅಧಿಕಾರ ಪತ್ರ ಅಥವಾ ಆದೇಶದ ಪ್ರತಿ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇದೆ, ಹಾಜರಪಡಿಸಿಲ್ಲ ಎಂದು ಹೇಳುತ್ತಾರೆ. ಸಾಲದ ಅರ್ಜಿಯನ್ನು ಹೊರತುಪಡಿಸಿ ಬೇರೆ ಯಾವುದಾದರೂ ಪ್ರಮಾಣ ಪತ್ರವನ್ನು 1 ನೇ ಅರ್ಜಿದಾರನಿಂದ ಪಡೆದಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಾಲ ನೀಡುವಾಗ ಸಾಲ ಪಡೆಯುತ್ತಿದ್ದ ವ್ಯಕ್ತಿಯ ಶೈಕ್ಷಣಿಕ ಅರ್ಹತೆ ಬಗ್ಗೆ ತಿಳಿದುಕೊಳುತ್ತೀರಾ ಎಂದರೆ ತಿಳಿದುಕೊಳ್ಳುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ-1 ಮತ್ತು ಪ್ರತಿವಾದಿ-2 ರವರ ಶೈಕ್ಷಣಿಕ ಅರ್ಹತೆ ಬಗ್ಗೆ ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಪ್ರತಿವಾದಿಗಳ ಶೈಕ್ಷಣಿಕ ಅರ್ಹತೆ ಬಗ್ಗೆ ತಿಳಿದುಕೊಳ್ಳದೆ ಅವರು ಸಹಿ ಮಾಡುತ್ತಿದ್ದ ದಾಖಲಾತಿಗಳ ಪೂರ್ತಿ ಮಾಹಿತಿ ಇಲ್ಲದೇ ನಿಮ್ಮ ಬಳಿ ಇದ್ದ ಎಲ್ಲಾ ಬ್ಲಾಂಕ ಫಾರಂಗಳ ಮೇಲೆ ಅವರ ಸಹಿ ಪಡೆದಿದ್ದೀರಿ ಎಂದರೆ ಸರಿಯಲ್ಲ. ಎಷ್ಟು ದಾಖಲಾತಿಗಳ ಮೇಲೆ ಪ್ರತಿವಾದಿ-1 ರವರ ಸಹಿ ಪಡೆದಿದ್ದೀರಿ ಎಂದರೆ 40 ಸಹಿಗಳನ್ನು ಪಡೆದಿದ್ದೇವೆ ಎಂದು ಹೇಳುತ್ತಾರೆ. ಯಾವುದೇ ದಾಖಲಾತಿಗಳನ್ನು ಓದದೇ ಕೇವಲ ನೀವು ಸಹಿ ಪಡೆದಿರುತ್ತೀರಿ ಎಂದರೆ ಸಾಲಕ್ಕಾಗಿ ಬಂದಿರುವುದರಿಂದ ಸಹಿ ಪಡೆದಿದ್ದೇವೆ ಎಂದು ಹೇಳುತ್ತಾರೆ. 40 ಸಹಿಗಳನ್ನು ಪಡೆಯಲು ಅರ್ಧ ಗಂಟೆ ಸಮಯ ಬೇಕಾಗುತ್ತದೆ. ಸಾಲ ಪಡೆಯಲು ಒಂದು ಗಂಟೆಯಲ್ಲಿ ಸಾಲದ ಅರ್ಜಿಯ ಮೇಲೆ ಸಹಿ ಪಡೆದು ಕಳುಹಿಸಿಕೊಡುತ್ತೇವೆ. ಸಾಲದ ದಾಖಲಾತಿಗಳ ಮೇಲೆ ಸಹಿ ಮಾಡಿದ ಒಂದು ಗಂಟೆ ಅವಧಿಯಲ್ಲಿ ಸದರಿ ದಾಖಲಾತಿಗಳ ವಿವರ ಪೂರ್ತಿಯಾಗಿ ಹೇಳಲು ಅಥವಾ ಓದಿ ತಿಳಿದುಕೊಳ್ಳಲು ಸಾಧ್ಯ ಇಲ್ಲ ಎಂದರೆ ನಾವು ತಿಳಿಸಿ ಹೇಳುತ್ತೇವೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಸಾಲ ಪಡೆಯುವ ದಿನ ಯಾರು, ಯಾರು ಬಂದಿದ್ದರು ಎಂದರೆ ಆಗ ನಾನು ಮ್ಯಾನೇಜರ ಇರಲಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಹಿರಿಯ ನಾಗರೀಕರು ಎಂದರೆ ಸಾಕ್ಷಿಯು ಸಾಲ ಪಡೆಯುವಾಗ ಹಿರಿಯ ನಾಗರೀಕರು ಇರಲಿಲ್ಲ ಎಂದು ಹೇಳುತ್ತಾರೆ. ಆಗ ಅವರಿಗೆ 59 ವರ್ಷ ಆಗಿತ್ತು ಎಂದರೆ ಸರಿ. ಪ್ರತಿವಾದಿ-1 ಮಹಿಳೆ ಎಂದರೆ ಸರಿ. 1 ನೇ ಪ್ರತಿವಾದಿ ಎಲ್ಲಿಯು ಕೆಲಸ ಮಾಡಿಲ್ಲ ಮತ್ತು ಹೆಚ್ಚಿನ ವಿದ್ಯಾಬ್ಯಾಸ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಹೆಸರಿನಲ್ಲಿ ವ್ಯವಸಾಯದ ಜಮೀನು ಇದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಮಗ ರಾಘವೇಂದ್ರ ನಾಯಕ ಎಂದರೆ ಸರಿ. ಅವರ ಮಗನೇ 1 ನೇ ಪ್ರತಿವಾದಿಯವರನ್ನು ಕೃಷಿ ಜಮೀನಕ್ಕೆ ಸಂಬಂಧಪಟ್ಟ ವ್ಯವಹಾರಗಳಿಗೆ ಕರೆದುಕೊಂಡು ಬಂದು-ಹೋಗಿ ಮಾಡುತ್ತಾರೆ ಎಂದರೆ, ಆ ರೀತಿ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಯಾವುದೇ ವ್ಯವಹಾರಕ್ಕೆ ಅವರ ಮಗನ ಜೊತೆಗೆ ಹೋಗುತ್ತಾರೆ ಎಂದರೆ ಅ ರೀತಿ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ.

3. ನೀವು ಸಾಲದ ದಾಖಲಾತಿಗಳಿಗೆ ಸಹಿ ಪಡೆದ ನಂತರ ಅದನ್ನು ತುಂಬುತ್ತೀರಿ ಎಂದರೆ ಸರಿ. ಸಾಕ್ಷಿಯು ನಂತರ ನಾವು ಸಹಿ ಮಾಡುತ್ತೇವೆ ಎಂದು ಹೇಳುತ್ತಾರೆ. ಸಾಲ ನೀಡುವಾಗ ಯಾವ ದಾಖಲಾತಿಗಳನ್ನು ಪಡೆಯುತ್ತೀರಿ ಎಂದರೆ ಪಹಣಿ ಪತ್ರಿಕೆ, ಮಾರ್ಟಗೇಜ ಡೀಡ, ಲೀಗಲ ಒಪಿನಿಯನ್ ಮತ್ತು ಸಾಲದ ದಾಖಲಾತಿಗಳ ಮೇಲೆ ಸಹಿ ಪಡೆಯುತ್ತೇವೆ ಎಂದು ಹೇಳುತ್ತಾರೆ. ವಕೀಲರ ಕಡೆಯಿಂದ ಪಡೆದ ಕಾನೂನು ಸಲಹೆಯನ್ನು ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿ-1 ಮತ್ತು 2 ರವರಿಗೆ ಆಂಗ್ಲ ಭಾಷೆ ಓದಲು - ಬರೆಯಲು ಬರುವುದಿಲ್ಲ, ಗಂಡನ ಭಾಷೆ ಅಲ್ಪ - ಸ್ವಲ್ಪ ಬರುತ್ತದೆ ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಆದ್ದರಿಂದ ಪ್ರತಿವಾದಿ-1 ಮತ್ತು ಪ್ರತಿವಾದಿ-2 ರವರಿಗೆ ಸಾಲದ ಬಗ್ಗೆ ಪೂರ್ತಿ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಸಾಲದ ಮೊತ್ತ ಮತ್ತು ಮುಖ್ಯ ವಿವರಗಳನ್ನು ಅವರಿಗೆ ಹೇಳುತ್ತೇವೆ ಎಂದು ಹೇಳುತ್ತಾರೆ. ನಾವು ಸಾಲ ನೀಡುವಾಗ ಆಧಾರ ಕಾರ್ಡ ಪಡೆದಿರುತ್ತೇವೆ. ಆಧಾರ ಕಾರ್ಡ ಹಾಜರಪಡಿಸಿದ್ದೇನೆ, ಛಾಯಾಚಿತ್ರ ಹಾಜರಪಡಿಸಿಲ್ಲ. ಪ್ರತಿವಾದಿ-1 ರವರಿಗೆ ಎಷ್ಟು ಮೊತ್ತದ ಸಾಲ ನೀಡುತ್ತೀದ್ದೀರಿ ಎಂದು ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವದಿ-1 ರವರಿಗೆ ನೀವು ನೋಟಿಸನ್ನು ಆಂಗ್ಲ ಭಾಷೆಯಲ್ಲಿ ನೀಡಿದ್ದು ಅವರಿಗೆ ಆಂಗ್ಲ ಭಾಷೆ ಓದಲು - ಬರೆಯಲು ಬರುವುದಿಲ್ಲ ಎಂದರೆ ಕನ್ನಡದಲ್ಲಿ ನೋಟಿಸ್ ನೀಡಿದ್ದೇವೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಯಾವುದೇ ಸಾಲ ಪಡೆಯದೇ ಇದ್ದರೂ ಸಹ ಬೇರೆಯವರು

ಅವರನ್ನು ಕರೆದುಕೊಂಡು ಬಂದು ಸಹಿ ಮಾಡಿಸಿದ್ದು, 1 ನೇ ಪ್ರತಿವಾದಿಗೆ ಸಾಲ ನೀಡಿದ್ದೀರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಡಮಾನ ಪತ್ರದ ಬಗ್ಗೆ ಮಾಹಿತಿ ಇಲ್ಲದೇ ಅದನ್ನು ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ಕೇವಲ ಸಹಿ ಪಡೆದು ನಂತರ ನಿಮಗೆ ಮನಸ್ಸಿಗೆ ಬಂದಂತೆ ಸಾಲದ ಮೊತ್ತ ಮತ್ತು ಬಡ್ಡಿದರವನ್ನು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ತಿಳಿಸಿ ಬರೆದಿದ್ದೇನೆ ಎಂದು ಹೇಳುತ್ತಾರೆ. ನೀವು ದಾಖಲಾಗಳನ್ನು ಸಹಿ ಪಡೆದ ನಂತರ ಬರೆದ ಬಗ್ಗೆ ಅವರಿಗೆ ಯಾವುದಾದರೂ ಸ್ವೀಕೃತಿ ಪತ್ರ ನೀಡುತ್ತೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. 1 ನೇ ಪ್ರತಿವಾದಿಯ ಮಗ ರಾಘವೇಂದ್ರ ನಾಯಕ ಸಾಲ ಪಡೆದಿದ್ದು, ಸದರಿ ಸಾಲಕ್ಕೆ ಕೇವಲ 1 ನೇ ಪ್ರತಿವಾದಿಯ ಸಹಿ ಪಡೆದಿದ್ದು, ಸದರಿ ಸಾಲಕ್ಕೆ ಮತ್ತು 1 ನೇ ಪ್ರತಿವಾದಿಯ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಪ್ರತಿವಾದಿ ಸಾಲದ ಮೊತ್ತ ಮರುಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನೀವು ಹಾಜರಪಡಿಸಿದ ದಾಖಲಾತಿಗಳು 1 ನೇ ಪ್ರತಿವಾದಿ ಸಾಲ ತೆಗೆದುಕೊಂಡಿದ್ದಾರೆ ಎಂದು ತೋರಿಸಲು ಸೂಕ್ತವಾದ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ. ನಿಮಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ, ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ